ಭಾರತೀ ನಗರ ವಿಧಾನಸಭಾ ಕ್ಷೇತ್ರದ ಲಕ್ಷ್ಮೀಪುರದಲ್ಲಿ ಡ್ರೈನೇಜ್ ವ್ಯವಸ್ಥೆಯ ಕೊರತೆಯ ಬಗ್ಗೆ

೨೩೪. ಶ್ರೀ ಕೆ. ಜೆ. ಜಾರ್ಜ್, (ಭಾರತೀನಗರ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತೀನಗರ ವಿಧಾನ ಸಭಾ ಕ್ಷೇತ್ರದ ಲಕ್ಷ್ಮೀಪುರಂನಲ್ಲಿ ಡ್ರೈನೇಜ್ ವ್ಯವಸ್ಥೆ ಸರಿಯಿಲ್ಲದೆ ಅತಿ ಕಡಿಮೆ ಮಳೆ ಬಂದರೂ ಸಹ ಅಗ್ನಿ ಶಾಮಕ ದಳದವರು ಬಂದು ನೀರನ್ನು ಹೊರ ಹಾಕುವ ಪರಿಸ್ಥಿತಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ನಗರ ಸಭೆಯವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಮಳೆ ಮತ್ತು ಚರಂಡಿ ನೀರು ಸರಾಗವಾಗಿ ಹರಿದು ಹೋಗಲು ಸೇತುವೆಯನ್ನು ಅಗಲ ಮಾಡಿ ಚರಂಡಿ ಮತ್ತು ಮುಂಖ್ಯ ಕಾಲುವೆಯನ್ನು ಅಗಲ ಮಾಡಲು ಮಹಾನಗರ ಪಾಲಿಕೆಯು ಉದ್ದೇಶಿಸಿದೆ. ಮೇಲ್ಕಂಡ ಕಾಮಗಾರಿಗೆ ಈಗಾಗಲೇ ಅಂದಾಜು ವೆಚ್ಚವನ್ನು ತಯಾರಿಸಲಾಗಿದೆ.

ಧರ್ಮಸ್ಥಳದಲ್ಲಿ ಒಳಚರಂಡಿ ವ್ಯವಸ್ಥೆ

೨೭೫. ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷಿಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲೂಕು ಧರ್ಮಸ್ಥಳದ ಒಳಚರಂಡಿ ಯೋಜನೆಯ ಕೆಲಸ ಪೂರ್ಣಗೊಂಡಿದು ಯಾವಾಗ ? ಅದಕ್ಕೆ ವೆಚ್ಚವಾದ ಮೊತ್ತವೆಷ್ಟು ?

ಆ) ಸದರಿ ಒಳಚರಂಡಿ ಯೋಜನೆಯ ಕೆಲಸ ಪೂರ್ತಿಯಾಗಿ ವರ್ಷಗಟ್ಟಲೆಯಾಗಿದ್ದರೂ, ನೀರು ಹರಿದುಹೋಗದೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿ ಕಳಪೆ ಕಾಮಗಾರಿಗೆ ಕಾರಣರಾದವರು ಯಾರು ಎಂಬುದಕ್ಕೆ ತಕ್ಷಣ ತನಿಖೆ ನಡೆಸಿ ಕಳಪೆ ಕಾಮಗಾರಿಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಿರಾ ?

ಈ) ಶ್ರೀ ಕ್ಷೇತ್ರದ ಧರ್ಮಸ್ಥಳಕ್ಕೆ ದಿನ ಒಂದಕ್ಕೆ ಸುಮಾರು ೫೦,೦೦೦ಕ್ಕೂ ಮಿಕ್ಕಿ ಯಾತ್ರಿಕರು ಬರುವುದರಿಂದ ಅವರೆಲ್ಲರ ಆರೋಗ್ಯದ ದೃಷ್ಟಿಯಿಂದ ಸದ್ರಿ ಒಳಚರಂಡಿ ಯೋಜನೆಯ ಕಾಮಗಾರಿಯನ್ನು ತಕ್ಷಣ ದುರಸ್ತಿ ಮಾಡಿಸಲಾಗುವುದೆ ?

ಉ) ಹಾಗಿದ್ದಲ್ಲಿ ಎಷ್ಟು ಸಮಯದ ಒಳಗೆ ದುರಸ್ತಿ ಮಾಡಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು),—

ಅ) ೧೯೮೨ರ ಜನವರಿಯಲ್ಲಿ ಪೂರ್ಣಗೊಂಡಿತು ಅದಕ್ಕೆ ತಗುಲಿದ ವೆಚ್ಚ ೮.೮ ಲಕ್ಷ ರೂಗಳು.

ಆ) ಬಂದಿದೆ.

ಇ) ಬೆಳ್ತಂಗಡಿ ಸಹಾಯಕ ಕಾರ್ಯಕಾರಿ ಅಭಿಯಂತರು ಸ್ಥಳಕ್ಕೆ ಭೇಟಿನೀಡಿ, ಕಳಪೆ ಕಾಮಗಾರಿಗೆ ಕಾರಣರಾರು ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಈ) ಮಾಡಿಸಲಾಗುವುದು.

ಉ) ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲು ಜಿಲ್ಲಾ ಪರಿಷತ್ತಿಗೆ ತಿಳಿಸಲಾಗುವುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳು

೧೧೫. ಶ್ರೀ ಎನ್. ಹೆಚ್. ಗೌಡ (ಕುಮಟಾ).— ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳು ಎಷ್ಟು, ಅವು ಯಾವುವು ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳನ್ನು ನಿರ್ಮಿಸಬೇಕಾದ ಸ್ಥಳಗಳು ಇನ್ನೂ ಇದೆಯೇ ? ಇದ್ದರೆ ಎಲ್ಲೆಲ್ಲಿ ? (ವಿವರ ನೀಡುವುದು).

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಮಂತ್ರಿಗಳು).

ಅ) ೨೮

೧) ಕಾರವಾರ
೨) ಮಾಗೋಡು ಫಾಲ್ಸ್
೩) ದಾಂಡೇಲಿ
೪) ಸೊಂಡಾ ಅಥವಾ ಸ್ವಾಧಿ
೫) ಹಲಿಯಾಳ
೬) ಯಾಣ
೭) ಗೋಕರ್ಣ
೮) ಉಂಚಳ್ಳಿ
೯) ಲಾಲ್ಗುಡಿ ಫಾಲ್ಸ್
೧೦) ಬನವಾಸಿ
೧೧) ಸೂಪ
೧೨) ಅಂಕೋಲ
೧೩) ಕುಂಟ
೧೪) ಕುರುಮಗೋಡ
೧೫) ಆಂಜನ ದ್ವೀಪ
೧೬) ಕೊಲಾಡಿ
೧೭) ಚಂದ್ರಗುತ್ತಿ
೧೮) ಉಳ್ಳಾವಿ
೧೯) ಬಳ್ಳಿಗಾವೆ
೨೦) ಜಗ್ಗರ ಕಣಿವೆ
೨೧) ಉಡುತಡಿ
೨೨) ಕ್ಯಾಸ್ಪಲರಾಕ್
೨೩) ಸಿರಸಿ
೨೪) ಧಾರೇಶ್ವರ
೨೫) ಮುರುಡೇಶ್ವರ
೨೬) ಭಟ್ಕಳ್
೨೭) ಸಿದ್ದಾಪುರ
೨೮) ಬಿಳಕೆರೆ

ಆ) ಇಲ್ಲ.

ಮಂಡಲ ಪಂಚಾಯಿತಿಗಳಿಗೆ ಹಂಚಿಕೆ ಮಾಡಿರುವ ಹಣ

೧೯೨. ಶ್ರೀ ಆರ್. ಎಂ. ಪಾಟೀಲ್ (ಅರಭಾವಿ).— ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಮಂಡಲ ಪಂಚಾಯತಿಗಳ ಸಂಖ್ಯೆ ಎಷ್ಟು ?